# ಅಂಟಿನ ಉಂಡೆ ಕದ್ದು ತಿಂದವರಾರು

■ **ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ**

ಕಲೆ: ಸಂತೋಷ್ ಸಸಿಹಿತ್ಲು



ಅಂದು ಉಗಾದಿ ಹಬ್ಬ. ಶ್ರೀಪಾಲಯ್ಯನವರ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಪತ್ನಿಗೆ ರೇಷ್ಮೆ ಸೀರೆ, ಇಬ್ಬರೂ ಗಂಡುಮಕ್ಕಳಿಗೆ ಪ್ಯಾಂಟು, ಶರಟು, ತಮಗೆ ಜರಿಪಂಚೆ, ಜುಬ್ಬಾ ತಂದಿದ್ದರು. ಮನೆಯವರೆಲ್ಲ ಅಭ್ಯಂಜನ ಮಾಡಿ, ದೇವರಿಗೆ ನಮಿಸಿ ಹಬ್ಬದ ಆಚರಣೆಯಲ್ಲಿ ತೊಡಗಿದ್ದರು. ಮಕ್ಕಳಿಬ್ಬರೂ ಹೊರಗೆ ಆಟವಾಡುತ್ತಿದ್ದರು. ಅಮ್ಮ ಗೌರಮ್ಮ ಬೆಳಗಿನ ಜಾವವೇ ಎದ್ದು ಅಂಟಿನ ಉಂಡೆ ಮಾಡಿ ಡಬ್ಬಿಯಲ್ಲಿಟ್ಟಿದ್ದಳು. ಅದೇನೋ ಯಾವತ್ತೂ ಲೆಕ್ಕ ಮಾಡದವಳು ಅಂದು ಎಣಿಸಿ ಸರಿಯಾಗಿ 38 ಉಂಡೆ ಆಗಿದ್ದು ಮನಗಂಡು ಖುಷಿಪಟ್ಟಿದ್ದಳು.


ಮಧ್ಯಾಹ್ನ ಊಟಕ್ಕೆಂದು ಎಲ್ಲರೂ ಒಟ್ಟಾಗಿ ಕುಳಿತಿದ್ದಾಗ ಬಡಿಸಲೆಂದು ಡಬ್ಬಿ ತೆಗೆದಳು. ಅರೆ! ಉಂಡೆಗಳ ಸಂಖ್ಯೆಯ ಬಗ್ಗೆ ಏಕೋ ಅನುಮಾನ! ಹೇಗಾದರಾಗಲಿ ಎಂದು ಒಮ್ಮೆ ಎಣಿಸಿ ನೋಡಿದಳು. ಬರೀ 29. ಇರಲಿ, ಊಟದ ವೇಳೆ ವಿಚಾರಣೆ ಬೇಡ. ನಂತರ ನೋಡೋಣ ಎಂದುಕೊಂಡು ಏನೂ ಆಗಿಲ್ಲ ಎಂಬಂತೆ ನಗುತ್ತಲೇ ಎಲ್ಲರಿಗೂ ಬಡಿಸಿದಳು. ಊಟ ಮುಗಿದು ಎಲ್ಲರೂ ಟೀವಿ ಮುಂದೆ ಕುಳಿತಾಗ ಗಂಡನಿಗೆ ವಿಷಯ ತಿಳಿಸಿದಳು. ಶ್ರೀಪಾಲಯ್ಯ ಮೊದಲೇ ಶಿಸ್ತಿನ ಮನುಷ್ಯ. ಸುಳ್ಳು, ಮೋಸ, ವಂಚನೆ ಯಾವುದನ್ನೂ ಸಹಿಸುತ್ತಿರಲಿಲ್ಲ. ಇದ್ದ ನಾಲ್ವರಲ್ಲಿ ಕದ್ದವರಾರು? ನಾವಿಬ್ಬರು ದಂಪತಿ ಬಿಟ್ಟರೆ ಉಳಿದವರು ಆ ಇಬ್ಬರು ಮಕ್ಕಳೇ ತಾನೇ? ಇಬ್ಬರಿಗೂ ಮಾರ್ಷಲ್ ವಿಚಾರಣೆ ನಡೆಸಿದರು. ಉಹುಂ, ಜಪ್ಪಯ್ಯ ಅಂದರೂ ಇಬ್ಬರೂ ಒಪ್ಪುತ್ತಿಲ್ಲ. ನಾನು ಕದ್ದಿಲ್ಲ. ಇಬ್ಬರದೂ ಒಂದೇ ಉದ್ಘೋಷ! ಅಷ್ಟರಲ್ಲಿ ಶ್ರೀಪಾಲಯ್ಯನವರಿಗೆ ಹೊರಗೆ ರಸ್ತೆಯಲ್ಲಿ ತಮ್ಮ ಮಕ್ಕಳ ಶಾಲಾ ಮಾಸ್ತರ್ ಹೋಗುತ್ತಿದ್ದುದು ಕಂಡಿತು. ಕೂಡಲೇ ಹೊರಗೋಡಿ ಅವರನ್ನು ಕರೆತಂದು ಕೂರಿಸಿ ನಿಂಬೂ ಶರಬತ್ ಕೊಟ್ಟು ಸತ್ಕರಿಸಿದ ನಂತರ ನಿಧಾನವಾಗಿ ಸದ್ಯದ ಸಮಸ್ಯೆಯ ಬಗ್ಗೆ ವಿವರಿಸಿ ದಯವಿಟ್ಟು ಕಳ್ಳರನ್ನು ಕಂಡುಹಿಡಿಯುವಂತೆ ಕೋರಿದರು.

ಮಾಸ್ತರ್ ಮೊದಲು ನಯ ವಿನಯದಿಂದಲೇ ವಿಚಾರಿಸಿದರು. ಬಗೆಹರಿಯಲಿಲ್ಲ. ಅವರಿಗೆ ಒಂದು ಉಪಾಯ ಹೊಳೆಯಿತು. ಇಬ್ಬರನ್ನೂ ಉದ್ದೇಶಿಸಿ

# ಹೀನ ನಾಯಿ

■ **ನೀ. ಶ್ರೀಶೈಲ, ಹುಲ್ಲೂರು**

ಕಲೆ: ಸಂತೋಷ್ ಸಸಿಹಿತ್ಲು



ಆಸೆಬುರುಕ ನಾಯಿಯೊಂದು
ಅಲ್ಲಿ ಇಲ್ಲಿ ಅಲೆದು ಅಲೆದು
ಊಟ ಸಿಗದೆ ಪೆಚ್ಚುಮೋರೆ
ಮಾಡಿಕೊಂಡಿತು

ಸಿಕ್ಕರೀಗ ತಿಂದುಬಿಡುವೆ
ಎಂದುಕೊಂಡು ನಡೆಯುವಾಗ
ದಾರಿಯಲ್ಲಿ ಎಲುಬನೊಂದ
ಕಂಡು ಹಿಗ್ಗಿತು

ಖುಷಿಯು ಹೆಚ್ಚಿ ಜಿಗಿದು ನೆಗೆದು
ಒಡನೆ ಹೋಗಿ ಅದನು ಕಚ್ಚಿ
ಓಟ ಕಿತ್ತ ಭರಕೆ ಜನರು
ಬೆಚ್ಚಿ ಬಿದ್ದರು

ಎಲ್ಲ ನಾಯಿಗಳನು ದೂಡಿ
ಬಿಡದೆ ತಾನೆ ಓಡಿ ಓಡಿ
ನದಿಯ ದಡದಿ ಹೊರಟ ಅದನು
ನೋಡುತಿದ್ದರು
ಗಿಡದ ಕೆಳಗೆ ನಿಂತ ನಾಯಿ